ಡಿ. ಡಬ್ಲ್ಯೂ ಃ 1

**ಸಾಕ್ಷಿಗೆ ದಿನಾಂಕ 20.06.2025 ರಂದು ಪ್ರಮಾಣ ವಚನ ನೀಡಲಾಯಿತು.**

**ಪಾಟೀಸವಾಲುಃವಾದಿ ಪರ ಶ್ರೀ ಎಮ್.ಆರ್.ಎಚ್ ವಕೀಲರಿಂದ**

ನನಗೆ ವಾದಿಯ ಪರಿಚಯ ನಾನು ಚಿಕ್ಕವನಾಗಿದ್ದಾಗಿದ್ದಲೂ ಇರುತ್ತದೆ. ವಾದಿ ನನ್ನ ವಿರುದ್ಧ ಸರ್ವೆನಂಬರ 14/2, 5 ಎಕರೆ 19 ಗುಂಟೆ ಜಮೀನಿಗೆ ಸಂಬಂಧಿಸಿದಂತೆ ದಾವೆ ಸಲ್ಲಿಸಿರುತ್ತಾರೆ. ದಾವಾ ಸ್ವತ್ತಿನ ಚೆಕ್ಕುಬಂಧಿ ಪೂರ್ವಕ್ಕೆ ನರಸಿಂಹಯ್ಯರವರ ಜಮೀನು, ಪಶ್ಚಿಮಕ್ಕೆ ತೋಳುಮಳಲಾಕಪ್ಪರವರ ಜಮೀನು, ಉತ್ತರಕ್ಕೆಃ ಬೆಳತೂರು ಗಡಿ, ದಕ್ಷಿಣಕ್ಕೆಃ ಸರ್ವೆನಂಬರ 15 ರ ಜಮೀನಿನಂತೆ ಚೆಕ್ಕುಬಂದಿ ಇರುತ್ತದೆ. ಸದರಿ ಜಮೀನು ವಾದಿಗೆ ಹೇಗೆ ಬಂದಿರುತ್ತದೆ ಎಷ್ಟು ವರ್ಷಗಳಿಂದ ಬಂದಿರುತ್ತದೆಂದು ನನಗೆ ಗೊತ್ತಿಲ್ಲ. ವಾದಿಯು ಹಾಜರುಪಡಿಸಿದ ದಾಖಲೆಗಳನ್ನು ನಾನು ಪರಿಶೀಲನೆ ಮಾಡಿಲ್ಲ. ದಾವಾ ಸ್ವತ್ತಿನಲ್ಲಿ ವಾದಿ ಸ್ವಾಧೀನದಲ್ಲಿ ಇಲ್ಲ ಹಾಗೂ ವ್ಯವಸಾಯ ಮಾಡುತ್ತಿಲ್ಲ. ವಾದಿ ಜಮೀನನ್ನು ಬಿಡಿಸಿಕೊಡಿ ಎಂದು ದಾವೆಯನ್ನು ಸಲ್ಲಿಸಿರುತ್ತಾರೆ. ದಾವಾ ಸ್ವತ್ತು ವಾದಿಗೆ ಸೇರಿದ ಸ್ವತ್ತು ಅಲ್ಲಾ ಎಂದು ನಾನು ತಕರಾರು ಸಲ್ಲಿಸಿರುತ್ತೇನೆ. ದಾವಾ ಸ್ವತ್ತಿನ ಪೂರ್ವಕ್ಕೆ ಸರ್ವೆ ನಂಬರ 16 ಮತ್ತು 17 ರ ಜಮೀನು ಇದೆ. ಸರ್ವೆ ನಂಬರ 13/2 ಎ, ಬಿ ದಾವಾ ಸ್ವತ್ತಿನ ದಕ್ಷಿಣಕ್ಕೆ ಇರುತ್ತದೆ. ದಾವಾ ಸ್ವತ್ತಿನ ಉತ್ತರಕ್ಕೆ ಸರ್ವೆ ನಂಬರ 13 ಜಮೀನು ಇಲ್ಲ. ದಾವಾ ಸ್ವತ್ತನ್ನು ನಾನು ನೋಡಿರುತ್ತೇನೆ ಸದರಿ ಸ್ವತ್ತಿನಲ್ಲಿ ನಾನು ಸ್ವಾದೀನದಲ್ಲಿರುತ್ತೇನೆ. ದಾವಾ ಸ್ವತ್ತಿನ ಉತ್ತರ ದಕ್ಷಿಣಕ್ಕೆ ಇರುವ ಜಮೀನು ವೆಂಕಟಯ್ಯರವರಿಗೆ ಸೇರಿದ ಜಮೀನು ಆಗಿರುತ್ತದೆ. ಉಪವಿಭಾಗಾಧಿಕಾರಿ ನ್ಯಾಯಾಲಯದಲ್ಲಿ ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ನನ್ನ ಕುಟುಂಬದವರ ವಿರುದ್ಧ ಪ್ರಕರಣ ದಾಖಲು ಮಾಡಿರುತ್ತೇನೆ. ವಾದಿಯನ್ನು ಸದರಿ ಪ್ರಕರಣದಲ್ಲಿ ಪಕ್ಷಗಾರರನ್ನಾಗಿ ಮಾಡಿರುತ್ತೇನೆ. ಜಮೀನು ನಮಗೆ ಸೇರಿದ್ದು ಭಾಗ ಬೇಕು ಎಂದು ಸದರಿರವರ ವಿರುದ್ಧ ಪ್ರಕರಣ ದಾಖಲು ಮಾಡಿರುತ್ತೇನೆ. ಸಿವಿಲ್ ನ್ಯಾಯಾಲಯದಲ್ಲಿ ಪರಿಹಾರ ಪಡೆದುಕೊಳ್ಳಿ ಎಂದು ಉಪವಿಭಾಗಾಧಿಕಾರಿಗಳು 2010 ರಲ್ಲಿ ಆದೇಶ ಮಾಡಿರುತ್ತಾರೆ. ಸದರಿ ಆದೇಶದ ವಿರುದ್ಧ ನಾನು ಯಾವುದೇ ಮೇಲ್ಮನವಿ ಸಲ್ಲಿಸಲಿಲ್ಲ.

ಉಪಭಾಗಾಧಿಕಾರಿರವರ ಆದೇಶದಂತೆ ನಾನು ಸಿವಿಲ್ ನ್ಯಾಯಾಲಯದಲ್ಲಿ ಯಾವುದೇ ದಾವೆ ಹೂಡಿಲ್ಲ.

2011 ನೇ ಸಾಲಿನಲ್ಲಿ ದಾವಾ ಸ್ವತ್ತಿನ ಪಹಣಿ ಪತ್ರಿಕೆ ವೆಂಕಟಯ್ಯರವರ ಹೆಸರಿನಲ್ಲಿತ್ತು. ಸದರಿ ಪಹಣಿಯನ್ನು ನಾನು ನನ್ನ ವಕೀಲರಿಗೆ ನೀಡಿರುತ್ತೇನೆ. ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. 2011 ರಲ್ಲಿ ವೆಂಕಟಯ್ಯರವರ ಹೆಸರಿನಲ್ಲಿ ಪಹಣಿ ಪತ್ರಿಕೆ ಇರಲಿಲ್ಲ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 2011 ರಲ್ಲಿ ದಾವಾ ಸ್ವತ್ತಿನ ಖಾತೆ ವಾದಿಯ ಹೆಸರಿನಲ್ಲಿತ್ತು ಎಂದರೆ ಸರಿ. ಸದರಿ ಖಾತೆಯನ್ನು ಪ್ರಶ್ನಿಸಿ ನಾನು ಉಪವಿಭಾಗಾಧಿಕಾರಿ ನ್ಯಾಯಾಲಯದಲ್ಲಿ ಪ್ರಕರಣ ದಾಖಲು ಮಾಡಿರುತ್ತೇನೆಂದರೆ ಸರಿ. ಸದರಿ ಪ್ರಕರಣ ವಜಾಗೊಂಡಿರುತ್ತದೆಂದರೆ ಸರಿ. ಸದರಿ ಆದೇಶವನ್ನು ಪ್ರಶ್ನಿಸಿ ನಾನು ಜಿಲ್ಲಾಧಿಕಾರಿ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಿದ್ದೇನೆಂದರೆ ಸರಿಯಲ್ಲ. ಮೇಲ್ಮನವಿ ವಜಾಗೊಂಡಿರುತ್ತದೆಂದರೆ ನಾನು ಮೇಲ್ಮನವಿ ದಾಖಲು ಮಾಡಿಲ್ಲ ಎಂದು ನುಡಿಯುತ್ತಾರೆ. 2011 ರಲ್ಲಿ ಯಾವ ಆಧಾರದ ಮೇಲೆ ವಾದಿಯ ಹೆಸರಿಗೆ ಖಾತೆ ಬದಲಾವಣೆ ಆಗಿತ್ತು ಎಂದು ನನಗೆ ಗೊತ್ತಿಲ್ಲ. ನಾನು ವಾದಿಯ ಹೆಸರಿನಲ್ಲಿದ್ದ ಎಮ್.ಆರ್ 29/2010-11 ರ ಖಾತೆಯನ್ನು ಪ್ರಶ್ನಿಸಿ ಉಪವಿಭಾಗಾಧಿಕಾರಿಗಳ ನ್ಯಾಯಾಲಯದಲ್ಲಿ ಪ್ರಕರಣ ದಾಖಲು ಮಾಡಿದ್ದೇನು ಎಂದರೆ ಸರಿ. ಸದರಿ ಮ್ಯುಟೇಶನ್ ನ್ನು ನಾನು ಓದಿ ತಿಳಿದುಕೊಂಡಿರುತ್ತೇನೆ. ನಿಪಿ-2 ರಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ. ನಿಪಿ-1 ರ ಆಧಾರದ ಮೇಲೆ ವಾದಿಯ ಹೆಸರಿಗೆ ದಾವಾ ಸ್ವತ್ತಿನ ಖಾತೆ ಬದಲಾವಣೆ ಆಗಿರುತ್ತದೆಂದರೆ ನನಗೆ ಗೊತ್ತಿಲ್ಲ. ನಿಪಿ-1 ರಲ್ಲಿರುವ ಮಾರಾಟಗಾರರ ಬಗ್ಗೆ ನನಗೆ ಗೊತ್ತಿರುತ್ತದೆ. ನನಗೂ ಮತ್ತು ಸದರಿರವರಿಗೂ ಯಾವುದೇ ಮನಸ್ತಾಪ ಇಲ್ಲ ಎಂದರೆ ಸರಿ. ನಿಪಿ-1 ನ್ನು ನಾನು ಎಲ್ಲಿಯೂ ಸಹ ಪ್ರಶ್ನೆ ಮಾಡಿಲ್ಲ. ನಿಪಿ-1 ರ ಖರೀದಿ ಪತ್ರಕ್ಕೆ ನನಗೆ ಯಾವುದೇ ತಕರಾರು ಇಲ್ಲ ಎಂದರೆ ಸರಿಯಲ್ಲ. ವಾದಿಯ ಹೆಸರಿಗೆ ಖರೀದಿ ಪತ್ರ ಬರೆದಕೊಟ್ಟಿರುವುದು ಸರಿಯಾಗಿದ್ದರಿಂದ ನಾನು ಎಲ್ಲಿಯೂ ಪ್ರಶ್ನೆ ಮಾಡಿಲ್ಲ ಎಂದರೆ ಸರಿಯಲ್ಲ. ನಿಪಿ-1 ರ ಆಧಾರದ ಮೇಲೆ ವಾದಿಯ ಹೆಸರಿಗೆ ಖಾತೆ ಬದಲಾವಣೆ ಆಗಿದೆ ಎಂದರೆ ನನಗೆ ಗೊತ್ತಿಲ್ಲ. ನಿಪಿ-1 ರ ಆಧಾರದ ಮೇಲೆ 2011 ರಿಂದ ಇಲ್ಲಿಯ ವರೆಗೂ ಸಹ ವಾದಿಯ ಹೆಸರಿನಲ್ಲಿ ಪಹಣಿ ಪತ್ರಿಕೆ ಇರುತ್ತದೆಂದರೆ ನನಗೆ ಗೊತ್ತಿಲ್ಲ.

ವಾದಿ ದಾವಾ ಸ್ವತ್ತಿನಲ್ಲಿ ಸ್ವಾಧೀನದಲ್ಲಿದ್ದು ನಾನು ಹಾಗೂ 1 ನೇ ಪ್ರತಿವಾದಿ ವಾದಿಯ ಸ್ವಾಧೀನಕ್ಕೆ ತಕರಾರು ಮಾಡಿರುತ್ತೇವೆಂದರೆ ಸರಿಯಲ್ಲ. ವಾದಿಯ ಸ್ವಾಧೀನಕ್ಕೆ ನಾನು 1 ನೇ ಪ್ರತಿವಾದಿ ತೊಂದರೆ ನೀಡಿದ್ದರಿಂದ ವಾದಿ ಗ್ರಾಮದಲ್ಲಿ ಹಿರಿಯರೊಂದಿಗೆ ನ್ಯಾಯ ಪಂಚಾಯಿತಿ ಮಾಡಿದ್ದರು ಎಂದರೆ ಸರಿಯಲ್ಲ. ನಾನು ಉಳಿದ ಪ್ರತಿವಾದಿಯವರು 2011 ವಾದಿಯನ್ನು ದಾವಾ ಆಸ್ತಿಯಿಂದ ಹೊರದಬ್ಬಲು ಪ್ರಯತ್ನ ಪಟ್ಟಿರುತ್ತೇವೆಂದರೆ ಸರಿಯಲ್ಲ, ಆದ್ದರಿಂದ ವಾದಿ ಪ್ರಸ್ತೂತ ದಾವೆಯನ್ನು ಸಲ್ಲಿಸಿರುತ್ತಾರೆಂದರೆ ಸರಿಯಲ್ಲ. ದಾವಾ ಸ್ವತ್ತಿನ ಪೂರ್ವಕ್ಕೆ ಇರುವ ನರಸಯ್ಯ, ವೆಂಕಟನಾಯಕ, ಲಕ್ಕಪ್ಪರವರಿಗೂ ನನಗೂ ಯಾವುದೇ ಮನಸ್ತಾಪ ಇರುವುದಿಲ್ಲ. ನಾನು ದಾವಾ ಸ್ವತ್ತಿನಲ್ಲಿ ಸ್ವಾಧೀನದಲ್ಲಿದ್ದೇನೆಂದು ಹೇಳಿದ್ದು ಸದರಿ ಬಗ್ಗೆ ಊರಿನಲ್ಲಿ ಇರುವ ನರಸಯ್ಯ, ವೆಂಕಟನಾಯಕ, ಲಕ್ಕಪ್ಪರವರು ನೋಡಿರುತ್ತಾರೆ. ಸದರಿರವರ ಸಾಕ್ಷ್ಯ ನುಡಿಸಲು ನನಗೆ ಯಾವುದೇ ತೊಂದರೆ ಇಲ್ಲ. ನಾನಾಗಾಲಿ 1 ನೇ ಪ್ರತಿವಾದಿಯಾಗಲಿ ಎಂದಿಗೂ ಸಹ ದಾವಾ ಸ್ವತ್ತಿನಲ್ಲಿ ಸ್ವಾಧೀನ ಹೊಂದಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿ ಸ್ವಾಧೀನ ಇದ್ದ ಬಗ್ಗೆ ನ್ಯಾಯಾಲಯಕ್ಕೆ ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ. ನಾನಾಗಾಲಿ ನನ್ನ ತಾಯಿಯಾಗಲಿ ದಾವಾ ಸ್ವತ್ತಿನಲ್ಲಿ ಎಂದಿಗೂ ಸಹ ಸ್ವಾಧೀನದಲ್ಲಿಲ್ಲ ಆ ಬಗ್ಗೆ ದಾಖಲೆಗಳು ಇಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತಿಗೆ ವಾದಿಯೇ ಮಾಲೀಕರಾಗಿ ಸ್ವಾಧೀನದಲ್ಲಿದ್ದಾರೆಂದರೆ ಸರಿಯಲ್ಲ.

**ಮುಂದುವರೆದ ಪಾಟೀಸವಾಲಿಗೆ ಕಾಲಾವಕಾಶವನ್ನು ಕೇಳಿದ್ದು ಕಾಲವಕಾಶ ನೀಡಲಾಯಿತು.**

ನನ್ನ ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಸಾ.ಓ.ಹೇ.ಸ.ಒ

ಸಿವಿಲ್ ಜಡ್ಜ್ ಮತ್ತು ಜೆಎಂಎಫ್.ಸಿ
ಹುಣಸೂರು.